| Deposition Sheets (RP.No.57) Form No.4 | IN THE COURT OF PRL. CIVIL JUDGE & J.M.F.C., KARKALA.<br><br>Criminal Case No. 1564/2023 |
|---|---|

ಪಿಡ್ಬ್ಲೂಃ 7 ಸಿಡ್ಲ್ಯೂಃ 6

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಆಕಾಶ್ ಕುಮಾರ್ |
| ತಂದೆಯ ಹೆಸರು | ಃ | ಸಂಜೀವ ಪೂಜಾರಿ |
| ಪ್ರಾಯ | ಃ | 25 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸ | ಃ | ಮಲೆಬೆಟ್ಟು ದುರ್ಗಾ |

ದಿನಾಂಕ 04.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಸುಮಾರು 3 ವರ್ಷದ ಹಿಂದೆ ಪೊಲೀಸರು ನನಗೆ ಫೋನ್ ಮಾಡಿ ಮುಂಡ್ಲಿ ಡಾಮ್ ಬಳಿ ಮಹಜರಿಗೆ ಸಹಿ ಮಾಡಲು ಬರ ಮಾಡಿಕೊಂಡಿದ್ದರು. ನನಗೆ ಕಬ್ಬಿಣ ಕಳುವಾದ ಬಗ್ಗೆ ಮಹಜರು ಮಾಡುತ್ತಿರುವುದಾಗಿ ಹೇಳಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಪೊಲೀಸರು ಮತ್ತು ಪುರಸಭೆಯವರು ಇದ್ದರು. ಪೊಲೀಸರು ಸ್ಥಳದಲ್ಲಿ ನಿಪಿ-1 ಮಹಜರು ಮಾಡಿರುತ್ತಾರೆ. ಸದ್ರಿ ಮಹಜರಿಗೆ ನಾನು ಸಹಿ ಹಾಕಿರುತ್ತೇನೆ. ಈಗ ನಾನು ನೋಡಿದ ದಾಖಲೆಯಲ್ಲಿ ಸಹಿ ಇದೆ. ಸದ್ರಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದಂತಹ ನಿಪಿ-2 ರಿಂದ 6 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಪಿಎ ಎಸ್ ವಕೀಲರಿಂದಃ

ನನ್ನ ಮನೆಯಿಂದ ಮುಂಡ್ಲಿ ಡ್ಯಾಮ್ ಗೆ 10 ಕಿ ಮೀ ದೂರ ಇದೆ. ಬೀಟ್ ಪೊಲೀಸರು ನನ್ನ ನಂಬರನ್ನು ಪಡೆದುಕೊಂಡಿದ್ದರು, ಹಾಗಾಗಿ ಫೋನ್ ಮಾಡಿರುತ್ತಾರೆ. ನನ್ನ ಫೋನ್ ನಂಬರ್ ಮುಂಚಿನಿಂದಲೂ ಅವರ ಬಳಿ ಇತ್ತು. ನಾನು ಹೋದಾಗ ಪೊಲೀಸರು ಬರೆಯುತ್ತಾ ಇದ್ದರು. ಏನು ಬರೆದಿರುತ್ತಾರೆ ಎಂದು ಓದಿ ತಿಳಿದುಕೊಂಡಿರುವುದಿಲ್ಲ. ಬೀಟ್ ಪೊಲೀಸರು ಹೇಳಿದ ಮೇರೆಗೆ ನಾನು ದಾಖಲೆಗೆ ಸಹಿ ಹಾಕಿರುತ್ತೇನೆ. ತಕ್ಷೀರು ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದು ಗೊತ್ತಿಲ್ಲ. ಅವರು ಫೋಟೊ ಗೆ ನಿಲ್ಲಲು ಹೇಳಿದರು, ಹಾಗೇ ನಾನು ನಿಂತಿದ್ದೆ ಅದನ್ನು ಯಾವ ವಿಚಾರಕ್ಕೆ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ಚಾಸಾ-5 ನನ್ನ ಒಟ್ಟಿಗೆ ಇದ್ದರು ನಾನೇ ಅವರನ್ನು ಕರೆದುಕೊಂಡು ಹೋಗಿದ್ದೆ.

ನಾನು ಸ್ಥಳಕ್ಕೆ ಹೋಗಿರುವುದಿಲ್ಲ, ಸ್ಥಳದಲ್ಲಿ ಯಾವುದೆ ಮಹಜರು ಮಾಡಿರುವುದಿಲ್ಲ, ನಾನು ಸ್ಥಳದಲ್ಲಿ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಮೊದಲೆ ಪೊಲೀಸರ ಪರಿಚಯ ಇದ್ದ ಕಾರಣ ನಾನು ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಭವಚಿತ್ರ ತೆಗೆದ ಬಗ್ಗೆ ನಿಪಿ-1 ರಲ್ಲಿ ನಮೂದು ಇಲ್ಲ ಎಂದರೆ ಗೊತ್ತಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ